# ರಮದಾನ್ ತಿಂಗಳ ಕೊನೆಯ ಹತ್ತು ದಿನಗಳು

# ﴾العشر الأواخر من رمضان ﴿

[**Kannada –** ಕನ್ನಡ – كنادي ]


ಇಮಾಮ್ ಇಬ್ನ್ ರಜಬ್ ಅಲ್‌ಹಂಬಲೀ (ಮರಣ: ಹಿ. 795)

الإمام ابن رجب الحنبلي

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ترجمة: محمد حمزة بتوري



2014 - 1435

IslamHouse.com

بِسْمِ اللهِ الرَّحْمَـنِ الرَّحِيم

ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಹದೀಸೊಂದರಲ್ಲಿ ಆಇಶಾ(ﷺ)ರವರು ಹೇಳುತ್ತಾರೆ:

كَانَ رَسُولُ اللَّهِ صَلَّى اللَّهُ عَلَيْهِ وَسَلَّمَ إِذَا دَخَلَ الْعَشْرُ شَدَّ مِئْزَرَهُ وَأَحْيَا لَيْلَهُ وَأَيْقَظَ أَهْلَهُ.

"ರಮದಾನ್ ತಿಂಗಳ ಕೊನೆಯ ಹತ್ತು ದಿನಗಳು ಪ್ರವೇಶಿಸುವಾಗ ಅಲ್ಲಾಹನ ರಸೂಲ್(ﷺ)ರವರು ತಮ್ಮ ಮಿಅ್‌ಝರನ್ನು ಬಿಗಿಯಾಗಿ ಕಟ್ಟುತ್ತಿದ್ದರು, ತಮ್ಮ ಆ ರಾತ್ರಿಯನ್ನು ಜೀವಂತಗೊಳಿಸುತ್ತಿದ್ದರು ಮತ್ತು ತಮ್ಮ ಕುಟುಂಬವನ್ನು ಎಬ್ಬಿಸುತ್ತಿದ್ದರು." [ಅಲ್‌ಬುಖಾರಿ (2024), ಮುಸ್ಲಿಮ್ (1174)]

ಇದು ಅಲ್‌ಬುಖಾರಿಯಲ್ಲಿರುವ ಪದಗಳಾಗಿವೆ. ಮುಸ್ಲಿಮ್‌ನಲ್ಲಿರುವ ಪದಗಳು ಹೀಗಿವೆ:

أَحْيَا اللَّيْلَ وَأَيْقَظَ أَهْلَهُ وَجَدَّ وَشَدَّ الْمِئْزَرَ.

"ಅವರು ರಾತ್ರಿಯನ್ನು ಜೀವಂತಗೊಳಿಸುತ್ತಿದ್ದರು, ತಮ್ಮ ಕುಟುಂಬವನ್ನು ಎಬ್ಬಿಸುತ್ತಿದ್ದರು, ಪರಿಶ್ರಮಪಡುತ್ತಿದ್ದರು ಮತ್ತು ಮಿಅ್‌ಝರನ್ನು ಬಿಗಿಯಾಗಿ ಕಟ್ಟುತ್ತಿದ್ದರು."

ಮುಸ್ಲಿಮ್‌ನಲ್ಲಿರುವ ಇನ್ನೊಂದು ವರದಿಯಲ್ಲಿ ಹೀಗಿದೆ:

كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يَجْتَهِدُ فِي الْعَشْرِ الْأَوَاخِرِ مَا لَا يَجْتَهِدُ فِي غَيْرِهِ.

"ಅಲ್ಲಾಹನ ರಸೂಲ್(ﷺ)ರವರು ಕೊನೆಯ ಹತ್ತರಲ್ಲಿ, ಅವುಗಳ ಹೊರತಾಗಿರುವ ದಿನಗಳಲ್ಲಿ ಪರಿಶ್ರಮಪಡದಷ್ಟು ಪರಿಶ್ರಮಪಡುತ್ತಿದ್ದರು."

ಪ್ರವಾದಿ(ﷺ)ರವರು ರಮದಾನ್ ತಿಂಗಳ ಕೊನೆಯ ಹತ್ತನ್ನು, ಅವುಗಳಲ್ಲಿ ಕೆಲವು ಕರ್ಮಗಳನ್ನು ಮಾಡುವ ಮೂಲಕ ವಿಶೇಷಗೊಳಿಸುತ್ತಿದ್ದರು. ಆ ತಿಂಗಳ ಉಳಿದ ದಿನಗಳಲ್ಲಿ ಅವರು ಇವುಗಳನ್ನು ಮಾಡುತ್ತಿರಲಿಲ್ಲ. ಅವುಗಳಲ್ಲಿ ಕೆಲವು ಹೀಗಿವೆ:

1. ರಾತ್ರಿಯನ್ನು ಜೀವಂತಗೊಳಿಸುವುದು:

ಇದರ ಉದ್ದೇಶ ರಾತ್ರಿಯನ್ನು ಸಂಪೂರ್ಣವಾಗಿ ಜೀವಂತಗೊಳಿಸುವುದು ಎಂದಾಗಿರಬಹುದು. ಮುಸ್ನದ್‌ನಲ್ಲಿರುವ ವರದಿಯಲ್ಲಿ ಆಇಶಾ(ﷺ)ರವರು ಹೇಳುತ್ತಾರೆ:

كَانَ النَّبِيُّ صَلَّى اللَّهُ عَلَيْهِ وَسَلَّمَ يَخْلِطُ الْعِشْرِينَ بِصَلَاةٍ وَنَوْمٍ، فَإِذَا كَانَ الْعَشْرُ شَمَّرَ وَشَدَّ الْمِئْزَرَ.

"ಪ್ರವಾದಿ(ﷺ)ರವರು (ಮೊದಲ) ಇಪ್ಪತ್ತು ದಿನಗಳನ್ನು ನಮಾಝ್ ಮತ್ತು ನಿದ್ದೆಯೊಂದಿಗೆ ಬೆರೆಸುತ್ತಿದ್ದರು. (ಅಂದರೆ ಅವರು ನಮಾಝ್ ಮಾಡುತ್ತಲೂ ನಿದ್ದೆ ಮಾಡುತ್ತಲೂ ಇದ್ದರು). ಆದರೆ ಕೊನೆಯ ಹತ್ತರಲ್ಲಿ ಅವರು ಪರಿಶ್ರಮಪಡುತ್ತಿದ್ದರು ಮತ್ತು ತಮ್ಮ ಮಿಅ್‌ಝರನ್ನು ಬಿಗಿಯಾಗಿ ಕಟ್ಟುತ್ತಿದ್ದರು." [ಮುಸ್ನದ್ ಅಹ್ಮದ್ 6/146]

ರಾತ್ರಿಯನ್ನು ಜೀವಂತಗೊಳಿಸುವುದು ಎಂಬುದರ ಉದ್ದೇಶವು ರಾತ್ರಿಯ ಹೆಚ್ಚಿನ ಭಾಗವನ್ನು ಜೀವಂತಗೊಳಿಸುವುದು ಎಂದಾಗಿರಬಹುದು. ಬನೂ ಹಾಶಿಮ್‌ಗಳಲ್ಲಿ ಸೇರಿದ ಪೂರ್ವಿಕರ ಪೈಕಿ ಒಬ್ಬರು –ವರದಿಗಾರರ ಭಾವನೆ ಪ್ರಕಾರ ಅವರು ಅಬೂ ಜಅ್‌ಫರ್ ಮುಹಮ್ಮದ್ ಇಬ್ನ್ ಅಲೀ (ಅರ್ಥಾತ್ ಜಅ್‌ಫರ್ ಅಲ್‌ಬಾಕಿರ್. ಇವರು ಅಲೀ ಇಬ್ನ್ ಅಬೀ ತಾಲಿಬ್(ﷺ)ರವರ ಮಗನಾದ ಅಲ್‌ಹಸನ್‌ರವರ ಮಗನಾದ ಅಲೀರವರ ಮಗನಾಗಿದ್ದಾರೆ.) ಆಗಿದ್ದಾರೆ– ಇದನ್ನು ಅರ್ಧ ರಾತ್ರಿಯನ್ನು ಜೀವಂತಗೊಳಿಸುವುದು ಎಂದು ವ್ಯಾಖ್ಯಾನಿಸಿದ್ದರೆಂದು ವರದಿಯಾಗಿದೆ. ಅವರು ಹೇಳುತ್ತಾರೆ:

مَنْ أَحْيَا نِصْفَ اللَّيْلِ فَقَدْ أَحْيَا اللَّيْلَ.

"ಯಾರಾದರೂ ರಾತ್ರಿಯ ಅರ್ಧ ಭಾಗವನ್ನು ಜೀವಂತಗೊಳಿಸಿದರೆ ಅವರು (ಸಂಪೂರ್ಣ) ರಾತ್ರಿಯನ್ನು ಜೀವಂತಗೊಳಿಸಿದವನಾಗಿದ್ದಾನೆ."

ಸಹೀಹ್ ಮುಸ್ಲಿಮ್‌ನಲ್ಲಿರುವ ಆಇಶಾ(ﷺ)ರವರ ಮಾತು ಇದನ್ನು ಬಲಪಡಿಸುತ್ತದೆ.

مَا أَعْلَمُهُ صَلَّى اللَّهُ عَلَيْهِ وَسَلَّمَ قَامَ لَيْلَةً حَتَّى الصَّبَاحَ.

"ಪ್ರವಾದಿ(ﷺ)ರವರು ಒಂದು ರಾತ್ರಿಯಲ್ಲಿ ಬೆಳಗಿನ ತನಕ ನಮಾಝ್ ಮಾಡಿದ್ದನ್ನು ನಾನು ಅರಿತಿಲ್ಲ." [ಮುಸ್ಲಿಮ್ (746). ಇದು ಸುದೀರ್ಘವಾದ ಹದೀಸೊಂದರ ಭಾಗವಾಗಿದೆ.]

ಇಮಾಮ್ ಮಾಲಿಕ್ ತಮ್ಮ ಅಲ್‌ಮುವತ್ತಅ್‌ನಲ್ಲಿ ಹೇಳುತ್ತಾರೆ:

“ಸಈದ್ ಇಬ್ನುಲ್ ಮುಸಯ್ಯಬ್ ಹೀಗೆಂದಿರುವುದಾಗಿ ನನಗೆ ತಲುಪಿದೆ: ಯಾರು ಲೈಲತುಲ್ ಕದ್ರ್‌ನ ರಾತ್ರಿಯಲ್ಲಿ ಇಶಾ ನಮಾಝ್‌ಗೆ ಹಾಜರಾಗುತ್ತಾನೋ –ಅಂದರೆ ಅದನ್ನು ಜಮಾಅತ್ ಆಗಿ ನಿರ್ವಹಿಸುತ್ತಾನೋ– ಅವನು ಲೈಲತುಲ್ ಕದ್ರ್‌ನಿಂದಿರುವ ತನ್ನ ಪಾಲನ್ನು ಪಡೆದಿರುವನು.” [ಅಲ್‌ಮುವತ್ತಅ್ 1/321]

ಇಮಾಮ್ ಅಶ್ಶಾಫಿಈರವರ ಹಳೆಯ ಅಭಿಪ್ರಾಯವು ಹೀಗಿದೆ:

“ಯಾರು ಲೈಲತುಲ್ ಕದ್ರ್‌ನಂದು ಇಶಾ ಮತ್ತು ಸುಬ್‌ಹ್ ನಮಾಝನ್ನು ಜಮಾಅತ್ ಆಗಿ ನಿರ್ವಹಿಸುತ್ತಾನೋ ಅವನು ಲೈಲತುಲ್ ಕದ್ರ್‌ನಿಂದಿರುವ ತನ್ನ ಪಾಲನ್ನು ಪಡೆದಿರುವನು.”

2. ಕುಟುಂಬವನ್ನು ಎಬ್ಬಿಸುವುದು:

ಪ್ರವಾದಿ(ﷺ)ರವರು ಕೊನೆಯ ಹತ್ತು ರಾತ್ರಿಗಳಲ್ಲಿ ನಮಾಝ್ ಮಾಡುವುದಕ್ಕಾಗಿ ತಮ್ಮ ಕುಟುಂಬವನ್ನು ಎಬ್ಬಿಸುತ್ತಿದ್ದರು. ಆದರೆ ಉಳಿದ ರಾತ್ರಿಗಳಲ್ಲಿ ಅವರು ಹೀಗೆ ಎಬ್ಬಿಸುತ್ತಿರಲಿಲ್ಲ. ಪ್ರವಾದಿ(ﷺ)ರವರು ಸಹಾಬಾಗಳೊಂದಿಗೆ ಇಪ್ಪತ್ತಮೂರನೇ ರಾತ್ರಿ, ಇಪ್ಪತ್ತೈದನೇ ರಾತ್ರಿ ಮತ್ತು ಇಪ್ಪತ್ತೇಳನೇ ರಾತ್ರಿ ಕಿಯಾಮುಲ್ಲೈಲ್ ನಿರ್ವಹಿಸಿದಾಗ ಅವರು ತಮ್ಮ ಕುಟುಂಬವನ್ನು ಮತ್ತು ಪತ್ನಿಯರನ್ನು ಎಬ್ಬಿಸಿದ್ದು ಇಪ್ಪತ್ತೇಳನೇ ರಾತ್ರಿ ಮಾತ್ರವಾಗಿತ್ತೆಂದು ಅಬೂ ದರ್(ؓ) ವರದಿ ಮಾಡಿದ ಹದೀಸಿನಲ್ಲಿದೆ. ಲೈಲತುಲ್ ಕದ್ರನ್ನು ನಿರೀಕ್ಷಿಸಲಾಗುವ ರಾತ್ರಿಗಳಲ್ಲಿ ಪತ್ನಿಯರನ್ನು ಎಬ್ಬಿಸುವುದಕ್ಕೆ ಒತ್ತು ಕೊಡಲಾಗಿದೆಯೆಂಬುದನ್ನು ಇದು ಸೂಚಿಸುತ್ತದೆ.

ಅತ್ತಬರಾನೀ ಉದ್ಧರಿಸಿದ ಅಲೀ(ؓ)ರವರ ಹದೀಸಿನಲ್ಲಿ ಹೀಗಿದೆ:

كَانَ يُوقِظُ أَهْلَهُ فِي الْعَشْرِ الْأَوَاخِرِ مِنْ رَمَضَانَ، وَكُلَّ صَغِيرٍ وَكَبِيرٍ يُطِيقُ الصَّلَاةَ.

“ಅವರು ರಮದಾನ್ ತಿಂಗಳ ಕೊನೆಯ ಹತ್ತರಲ್ಲಿ ತಮ್ಮ ಕುಟುಂಬವನ್ನು ಮತ್ತು ನಮಾಝ್ ಮಾಡಲು ಶಕ್ತರಾಗಿರುವ ಕಿರಿಯರನ್ನು ಮತ್ತು ಹಿರಿಯರನ್ನು ಎಬ್ಬಿಸುತ್ತಿದ್ದರು.”

ಸುಫ್ಯಾನ್ ಅಸ್ಸೌರೀ ಹೇಳುತ್ತಾರೆ:

“ಕೊನೆಯ ಹತ್ತು ಪ್ರವೇಶಿಸಿದರೆ ರಾತ್ರಿಯಲ್ಲಿ ತಹಜ್ಜುದ್ ನಿರ್ವಹಿಸುವುದು ಮತ್ತು ಪರಿಶ್ರಮ ಪಡುವುದು, ಪತ್ನಿಯರನ್ನು ಮತ್ತು ಮಕ್ಕಳನ್ನು ನಮಾಝ್ ಮಾಡಲು –ಅವರಿಗೆ ಅದಕ್ಕೆ ಶಕ್ತರಾಗಿದ್ದರೆ– ಎಬ್ಬಿಸುವುದನ್ನು ನಾನು ಇಷ್ಟಪಡುತ್ತೇನೆ.

ಪ್ರವಾದಿ(ﷺ)ರವರು ಫಾತಿಮಾ ಮತ್ತು ಅಲೀ(ﷺ)ರವರ ಬಾಗಿಲನ್ನು ಬಡಿದು ನೀವು ಎದ್ದೇಳುವುದಿಲ್ಲವೇ? ನಮಾಝ್ ಮಾಡುವುದಿಲ್ಲವೇ? ಎಂದು ಕೇಳಿದ್ದರೆಂಬುದು ಸಹೀಹಾಗಿ ವರದಿಯಾಗಿದೆ."

ಅವರು ತಹಜ್ಜುದ್ ನಿರ್ವಹಿಸಿದ ಬಳಿಕ ವಿತ್ರ್ ನಮಾಝ್ ಮಾಡಲು ಬಯಸುವಾಗ ಆಇಶಾ(ﷺ)ರವರನ್ನು ಎಬ್ಬಿಸುತ್ತಿದ್ದರು. ಪತಿ ಪತ್ನಿಯರಲ್ಲಿ ಒಬ್ಬರು ಇನ್ನೊಬ್ಬರನ್ನು ನಮಾಝ್‌ಗಾಗಿ ಎಬ್ಬಿಸುವುದು ಮತ್ತು ಮುಖಕ್ಕೆ ನೀರು ಎರಚುವುದನ್ನು ಪ್ರೋತ್ಸಾಹಿಸುವ ಹದೀಸ್ ವರದಿಯಾಗಿದೆ.

ಅಲ್‌ಮುವತ್ತಅ್‌ನಲ್ಲಿ ವರದಿಯಾಗಿರುವ ಪ್ರಕಾರ ಉಮರ್ ಇಬ್ನುಲ್ ಖತ್ತಾಬ್ (ﷺ)ರವರು ರಾತ್ರಿಯಲ್ಲಿ ತಾವು ಇಚ್ಛಿಸುವ ತನಕ ನಮಾಝ್ ಮಾಡುತ್ತಿದ್ದರು. ಹೀಗೆ ಮಧ್ಯರಾತ್ರಿಯಾಗುವಾಗ ಅವರು ತಮ್ಮ ಕುಟುಂಬವನ್ನು ನಮಾಝ್‌ಗಾಗಿ ಎಬ್ಬಿಸಿ "ನಮಾಝ್, ನಮಾಝ್" ಎನ್ನುತ್ತಿದ್ದರು. ತರುವಾಯ ಈ ಆಯತ್ತನ್ನು ಓದುತ್ತಿದ್ದರು:

﴿ وَأْمُرْ أَهْلَكَ بِالصَّلَاةِ وَاصْطَبِرْ عَلَيْهَا ﴾

"ತಾವು ತಮ್ಮ ಕುಟುಂಬದವರಿಗೆ ನಮಾಝ್ ನಿರ್ವಹಿಸಲು ಆದೇಶಿಸಿರಿ. ಅದರಲ್ಲಿ (ನಮಾಝ್‌ನಲ್ಲಿ) ತಾವು ತಾಳ್ಮೆಯೊಂದಿಗೆ ಅಚಲರಾಗಿ ನಿಲ್ಲಿರಿ. [ತಾಹಾ 132]" (ಅಲ್‌ಮುವತ್ತಅ್ 1/119)

3. ಅವರು ತಮ್ಮ ಮಿಅ್‌ಝರನ್ನು ಬಿಗಿಯಾಗಿ ಕಟ್ಟುತ್ತಿದ್ದರು:

ಇದರ ಅರ್ಥವೇನು ಎಂಬುದರ ಬಗ್ಗೆ ಭಿನ್ನಾಭಿಪ್ರಾಯವಿದೆ. ಇದು ಇಬಾದತ್ ಮಾಡುವುದಕ್ಕಾಗಿ ತೀವ್ರವಾಗಿ ಕಷ್ಟಪಡುವುದು ಮತ್ತು ಪರಿಶ್ರಮಪಡುವುದು ಎಂದು ಕೆಲವರು ವ್ಯಾಖ್ಯಾನಿಸಿದ್ದಾರೆ. ಹೀಗೆ ಹೇಳಲಾಗುತ್ತದೆ:

فُلَانٌ يَشُدُّ وَسَطَهُ وَيَسْعَى فِي كَذَا.

"ಇಂತಿಂತಹವನು ತನ್ನ ಸೊಂಟವನ್ನು ಬಿಗಿಯಾಗಿ ಕಟ್ಟಿ ಇಂತಿಂತಹ ವಿಷಯದಲ್ಲಿ ಪರಿಶ್ರಮಪಡುತ್ತಿದ್ದಾನೆ."

ಆದರೆ ಈ ವ್ಯಾಖ್ಯಾನದಲ್ಲಿ ವಿಮರ್ಶೆಯಿದೆ. ಯಾಕೆಂದರೆ (ಒಂದು ವರದಿಯಲ್ಲಿ) ಆಇಶಾ(ﷺ)ರವರ ಮಾತು ಹೀಗಿದೆ:

جَدَّ وَشَدَّ الْمِئْزَرَ.

“ಅವರು ಕಷ್ಟಪಡುತ್ತಿದ್ದರು ಮತ್ತು ಮಿಅ್‌ಝರನ್ನು ಬಿಗಿಯಾಗಿ ಕಟ್ಟುತ್ತಿದ್ದರು.”

ಇಲ್ಲಿ ಆಇಶಾ(ﷺ)ರವರು ಕಷ್ಟಪಡುವುದನ್ನು ಮತ್ತು ಮಿಅ್‌ಝರನ್ನು ಬಿಗಿಯಾಗಿ ಕಟ್ಟುವುದನ್ನು ‘ವಾವುಲ್ ಅತ್ಫ್’ (و)ನ ಮೂಲಕ ಬೇರ್ಪಡಿಸಿದ್ದಾರೆ.

ಇದರ ಸರಿಯಾದ ಅರ್ಥವು ಪತ್ನಿಯರಿಂದ ದೂರವಾಗುವುದಾಗಿದೆ. ಸಲಫ್‌ಗಳು ಮತ್ತು ಪೂರ್ವಿಕ ಇಮಾಮ್‌ಗಳು ಇದನ್ನು ಈ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ. ಸುಫ್ಯಾನ್ ಅಸ್ಸೌರೀರವರು ಇವರಲ್ಲಿ ಸೇರುತ್ತಾರೆ. ಆಇಶಾ(ﷺ) ಮತ್ತು ಅನಸ್ (ﷺ)ರವರ ಹದೀಸ್‌ನಲ್ಲಿ ಇದು ಸ್ಪಷ್ಟವಾಗಿ ವರದಿಯಾಗಿದೆ. ಅವರು [ಪ್ರವಾದಿ(ﷺ)ರವರು] ರಮದಾನ್ ಕಳೆಯುವವರೆಗೆ ತಮ್ಮ ಹಾಸಿಗೆಯೆಡೆಗೆ ತಿರುಗಿ ನೋಡುತ್ತಿರಲಿಲ್ಲ ಎಂಬುದು ಇದರ ವ್ಯಾಖ್ಯಾನವಾಗಿದೆಯೆಂದೂ ವರದಿಯಾಗಿದೆ. ಅನಸ್‌ರವರ ಹದೀಸಿನಲ್ಲಿ ಹೀಗಿದೆ:

وَطَوَى فِرَاشَهُ وَاعْتَزَلَ النِّسَاءَ.

“ಅವರು ತಮ್ಮ ಹಾಸಿಗೆಯನ್ನು ಮಡಚಿಟ್ಟರು ಮತ್ತು ಪತ್ನಿಯರಿಂದ ದೂರವಾದರು.”

ಪ್ರವಾದಿ(ﷺ)ರವರು ಹೆಚ್ಚಿನ ಸಂದರ್ಭಗಳಲ್ಲೂ ಕೊನೆಯ ಹತ್ತರಲ್ಲಿ ಇಅ್‌ತಿಕಾಫ್ ನಿರ್ವಹಿಸುತ್ತಿದ್ದರು. ಸ್ಪಷ್ಟ ವಚನದ ಪ್ರಕಾರ ಮತ್ತು ವಿದ್ವಾಂಸರ ಏಕಾಭಿಪ್ರಾಯದ ಪ್ರಕಾರ ಇಅ್‌ತಿಕಾಫ್ ನಿರ್ವಹಿಸುವವನು ಪತ್ನಿಯರನ್ನು ಸಮೀಪಿಸಬಾರದು. ಅಲ್ಲಾಹನ ಈ ಕೆಳಗಿನ ವಚನವನ್ನು:

﴿ فَالْآنَ بَاشِرُوهُنَّ وَابْتَغُوا مَا كَتَبَ اللَّهُ لَكُمْ ﴾

“ಆದ್ದರಿಂದ ಇನ್ನು ಮುಂದೆ ನೀವು ಅವರೊಂದಿಗೆ ಲೈಂಗಿಕ ಸಂಪರ್ಕವನ್ನು ಮಾಡಿರಿ ಮತ್ತು ಅಲ್ಲಾಹು ನಿಮಗೆ ವಿಧಿಸಿರುವುದನ್ನು ಅರಸಿರಿ.”

ವ್ಯಾಖ್ಯಾನ ಮಾಡುತ್ತಾ ಸಲಫ್‌ಗಳ ಪೈಕಿ ಹೆಚ್ಚಿನವರು ಹೀಗೆನ್ನುತ್ತಾರೆ: “ಅಂದರೆ ಲೈಲತುಲ್ ಕದ್ರನ್ನು ಅರಸಿರಿ.”

ಇದರ ಅರ್ಥವೇನೆಂದರೆ ಉಪವಾಸದ ರಾತ್ರಿಗಳಲ್ಲಿ ಬಿಳಿ ನೂಲು ಕಪ್ಪು ನೂಲಿನಿಂದ ಸ್ಪಷ್ಟವಾಗಿ ಬೇರ್ಪಟ್ಟು ನಿಲ್ಲುವ ತನಕ ಪತ್ನಿ ಸಂಪರ್ಕ ಮಾಡುವುದಕ್ಕೆ ಅಲ್ಲಾಹು ಅನುಮತಿ ನೀಡುವುದರೊಂದಿಗೆ ಲೈಲತುಲ್ ಕದ್ರನ್ನು ಅರಸುವಂತೆಯೂ ಆದೇಶ ನೀಡಿದ್ದಾನೆ. ಇದು ಮುಸ್ಲಿಮರು ಆ ತಿಂಗಳ ಎಲ್ಲ ರಾತ್ರಿಗಳಲ್ಲೂ ತಮ್ಮ ಪತ್ನಿಯ ರೊಂದಿಗೆ ಸಲ್ಲಾಪ ಮಾಡುತ್ತಾ ಲೈಲತುಲ್ ಕದ್ರ್ ಅವರಿಗೆ ನಷ್ಟವಾಗಿ ಹೋಗದಿರಲಿ

ಎಂಬುದರಿಂದಾಗಿದೆ. ಆದ್ದರಿಂದ ಪತ್ನಿಯರೊಂದಿಗಿನ ಸಂಪರ್ಕಕ್ಕೆ ಅನುಮತಿ ನೀಡುವುದರೊಂದಿಗೆ ಅವನು ಲೈಲತುಲ್ ಕದ್ರನ್ನು ಅರಸುವುದಕ್ಕಾಗಿ ರಾತ್ರಿಗಳಲ್ಲಿ – ವಿಶೇಷವಾಗಿ ಲೈಲತುಲ್ ಕದ್ರನ್ನು ನಿರೀಕ್ಷಿಸಲಾಗುವ ರಾತ್ರಿಗಳಲ್ಲಿ– ತಹಜ್ಜುದ್ ನಿರ್ವಹಿಸಬೇಕೆಂದು ಅವನು ಆದೇಶ ನೀಡಿದ್ದಾನೆ. ಈ ಕಾರಣದಿಂದ ಪ್ರವಾದಿ (ﷺ)ರವರು ರಮದಾನ್ ತಿಂಗಳ ಮೊದಲ ಇಪ್ಪತ್ತು ದಿನಗಳನ್ನು ತಮ್ಮ ಪತ್ನಿಯರೊಂದಿಗೆ ಕಳೆಯುತ್ತಿದ್ದರು. ತರುವಾಯ ಕೊನೆಯ ಹತ್ತರಲ್ಲಿ ಅವರು ಲೈಲತುಲ್ ಕದ್ರನ್ನು ಅರಸುವುದಕ್ಕಾಗಿ ಅವರಿಂದ ದೂರವಾಗುತ್ತಿದ್ದರು.

4. ರಾತ್ರಿಯೂಟವನ್ನು ಸಹರ್‌ನ ಸಮಯದ (ಅಂದರೆ ಪ್ರಭಾತಕ್ಕೆ ಮುಂಚಿತವಾಗಿ ಸೇವಿಸುವ ಆಹಾರದ ಸಮಯ) ತನಕ ಮುಂದೂಡುವುದು:

ಆಇಶಾ(ﷺ) ಮತ್ತು ಅನಸ್(ﷺ)ರವರ ಹದೀಸಿನಲ್ಲಿ ಹೀಗಿದೆ:

كَانَ فِي لَيَالِي الْعَشْرِ يَجْعَلُ عَشَاءَهُ سَحُورًا.

"ಪ್ರವಾದಿ(ﷺ)ರವರು ಕೊನೆಯ ಹತ್ತು ರಾತ್ರಿಗಳಲ್ಲಿ ರಾತ್ರಿಯೂಟವನ್ನು ಸಹರ್ ಆಗಿ ಸೇವಿಸುತ್ತಿದ್ದರು."

ಆಇಶಾ(ﷺ)ರವರ ಹದೀಸಿನಲ್ಲಿರುವ ಪದಗಳು ಹೀಗಿವೆ:

كَانَ رَسُولُ اللَّهِ صَلَّى اللَّهُ عَلَيْهِ وَسَلَّمَ إِذَا كَانَ رَمَضَانَ قَامَ وَنَامَ، فَإِذَا دَخَلَ الْعَشْرُ شَدَّ الْمِئْزَرَ وَاجْتَنَبَ النِّسَاءَ وَاغْتَسَلَ بَيْنَ الْأَذَانَيْنِ وَجَعَلَ الْعَشَاءَ سَحُورًا.

"ರಮದಾನ್ ತಿಂಗಳಾಗುವಾಗ ಅಲ್ಲಾಹನ ರಸೂಲ್(ﷺ)ರವರು ನಮಾಝ್ ಮಾಡುತ್ತಿದ್ದರು ಮತ್ತು ನಿದ್ದೆ ಮಾಡುತ್ತಿದ್ದರು. (ಕೊನೆಯ) ಹತ್ತು ಪ್ರವೇಶಿಸುವಾಗ ಅವರು ಮಿಅ್‌ಝರನ್ನು ಬಿಗಿಯಾಗಿ ಕಟ್ಟುತ್ತಿದ್ದರು, ಪತ್ನಿಯರಿಂದ ದೂರವಾಗುತ್ತಿದ್ದರು, ಎರಡು ಅದಾನ್‌ಗಳ ಮಧ್ಯೆ ಸ್ನಾನ ಮಾಡುತ್ತಿದ್ದರು ಮತ್ತು ರಾತ್ರಿಯೂಟವನ್ನು ಸಹರ್ ಆಗಿ ಸೇವಿಸುತ್ತಿದ್ದರು."

ಇದನ್ನು ಇಬ್ನ್ ಅಬೀ ಆಸಿಮ್ ಉದ್ಧರಿಸಿದ್ದಾರೆ. ಇದರ ಸನದ್ (ಸಹೀಹ್ ಆಗಲು) ಬಹಳ ಹತ್ತಿರದಲ್ಲಿದೆ.

ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿ ಇದಕ್ಕೆ ಸಾಕ್ಷಿಯಾಗುವ ಹದೀಸೊಂದು ಅಬೂ ಹುರೈರಃ(ﷺ)ರಿಂದ ವರದಿಯಾಗಿದೆ. ಅದು ಹೀಗಿದೆ:

نَهَى رَسُولُ اللَّهِ صَلَّى اللَّهُ عَلَيْهِ وَسَلَّمَ عَنِ الْوِصَالِ فِي الصَّوْمِ، فَقَالَ لَهُ رَجُلٌ مِنَ الْمُسْلِمِينَ: إِنَّكَ تُوَاصِلُ يَا رَسُولَ اللَّهِ؟ قَالَ: «وَأَيُّكُمْ مِثْلِي؟ إِنِّي أَبِيتُ يُطْعِمُنِي رَبِّي وَيَسْقِينِي». فَلَمَّا أَبَوْا أَنْ يَنْتَهُوا عَنِ الْوِصَالِ وَاصَلَ بِهِمْ يَوْمًا ثُمَّ يَوْمًا ثُمَّ رَأَوُا الْهِلَالَ، فَقَالَ: «لَوْ تَأَخَّرَ لَزِدْتُكُمْ». كَالتَّنْكِيلِ لَهُمْ حِينَ أَبَوْا أَنْ يَنْتَهُوا.

"ಉಪವಾಸವನ್ನು ವಿಸಾಲ್ ಮಾಡುವುದನ್ನು (ವಿಸಾಲ್ ಮಾಡುವುದು ಎಂದರೆ ಇಫ್ತಾರ್ ಮಾಡದೆ ಉಪವಾಸವನ್ನು ಮುಂದುವರಿಸುವುದು) ಪ್ರವಾದಿ(ﷺ)ರವರು ವಿರೋಧಿಸಿದರು. ಆಗ ಮುಸ್ಲಿಮರಲ್ಲಿ ಸೇರಿದ ಒಬ್ಬ ವ್ಯಕ್ತಿ ಕೇಳಿದರು: ಓ ಅಲ್ಲಾಹನ ರಸೂಲರೇ! ತಾವು ವಿಸಾಲ್ ಮಾಡುತ್ತೀರಲ್ಲವೇ? ಆಗ ಪ್ರವಾದಿ(ﷺ)ರವರು ಹೇಳಿದರು: ನನ್ನಂತೆ ನಿಮ್ಮಲ್ಲಿ ಯಾರಿದ್ದಾರೆ? ನಾನು ರಾತ್ರಿ ಕಳೆಯುವಾಗ ನನ್ನ ರಬ್ಬ್ ನನಗೆ ತಿನ್ನಿಸುತ್ತಾನೆ ಮತ್ತು ಕುಡಿಸುತ್ತಾನೆ. ಆದರೆ ಅವರು ವಿಸಾಲ್ ಮಾಡುವುದನ್ನು ನಿಲ್ಲಿಸಲು ನಿರಾಕರಿಸಿದಾಗ ಪ್ರವಾದಿ(ﷺ)ರವರು ಅವರೊಂದಿಗೆ ಒಂದು ದಿನ ವಿಸಾಲ್ ಮಾಡಿದರು. ನಂತರ ಮರುದಿನ ವಿಸಾಲ್ ಮಾಡಿದರು. ತರುವಾಯ ಚಂದ್ರನನ್ನು ಕಂಡಾಗ ಅವರು ಹೇಳಿದರು: ಇದು (ಚಂದ್ರ ಗೋಚರವಾಗುವುದು) ತಡವಾಗುತ್ತಿದ್ದರೆ ನಾನು ನಿಮ್ಮೊಂದಿಗೆ ಇನ್ನೂ ವಿಸಾಲ್ ಮಾಡುತ್ತಿದ್ದೆ. ಇದು ಅವರು ವಿಸಾಲ್ ಮಾಡುವುದನ್ನು ನಿಲ್ಲಿಸದಿದ್ದಾಗ ಅವರಿಗೆ ಪಾಠ ಕಲಿಸುವುದಕ್ಕಾಗಿತ್ತು." [ಅಲ್‌ಬುಖಾರಿ (1965), ಮುಸ್ಲಿಮ್ (1103)]

ಪ್ರವಾದಿ(ﷺ)ರವರು (ರಮದಾನ್) ತಿಂಗಳ ಕೊನೆಯಲ್ಲಿ ಸಹಾಬಾಗಳೊಂದಿಗೆ ವಿಸಾಲ್ ಮಾಡಿದ್ದರೆಂಬುದಕ್ಕೆ ಇದರಲ್ಲಿ ಸೂಚನೆಯಿದೆ. ಆಸಿಮ್ ಇಬ್ನ್ ಕುಲೈಬ್ ತಮ್ಮ ತಂದೆಯಿಂದ, ಅವರು ಅಬೂ ಹುರೈರ(ರ)ರಿಂದ ವರದಿ ಮಾಡುತ್ತಾರೆ:

مَا وَاصَلَ النَّبِيُّ صَلَّى اللَّهُ عَلَيْهِ وَسَلَّمَ وِصَالَكُمْ قَطُّ غَيْرَ أَنَّهُ قَدْ أَخَّرَ الْفِطْرَ إِلَى السَّحُورِ.

"ನೀವು ವಿಸಾಲ್ ಮಾಡುವಂತೆ ಪ್ರವಾದಿ(ﷺ)ರವರು ಎಂದೂ ವಿಸಾಲ್ ಮಾಡಿರಲಿಲ್ಲ. ಆದರೆ ಅವರು ಇಫ್ತಾರನ್ನು ಸಹರ್‌ನ ಸಮಯದ ತನಕ ಮುಂದೂಡುತ್ತಿದ್ದರು." ಇದರ ಸನದ್‌ನಲ್ಲಿ ತೊಂದರೆಯಿಲ್ಲ. ಇಮಾಮ್ ಅಹ್ಮದ್‌ರವರು ವರದಿ ಮಾಡಿದ ಅಲೀ(ರ)ರವರ ಹದೀಸಿನಲ್ಲಿ ಹೀಗಿದೆ:

كَانَ يُوَاصِلُ إِلَى السَّحَرِ.

“ಪ್ರವಾದಿ(ﷺ)ರವರು ಸಹರ್‌ನ ಸಮಯದ ತನಕ ವಿಸಾಲ್ ಮಾಡುತ್ತಿದ್ದರು.” [ಮುಸ್ನದ್ ಅಹ್ಮದ್ 1/91, 141]

ಇದನ್ನು ಅತ್ತಬರಾನೀ ಜಾಬಿರ್(ﷺ)ರವರ ಹದೀಸಿನಿಂದಲೂ ಉದ್ಧರಿಸಿದ್ದಾರೆ. [ಮಜ್ಮಉಝ್ಝವಾಇದ್ 3/158]

ಇಬ್ನ್ ಜರೀರ್ ಅತ್ತಬರೀ ಉದ್ಧರಿಸಿದ ಅಬೂ ಹುರೈರಃ(ﷺ)ರವರ ಹದೀಸಿನಲ್ಲಿರುವಂತೆ ಪ್ರವಾದಿ(ﷺ)ರವರು ಸಹರ್‌ನ ಸಮಯದ ತನಕ ವಿಸಾಲ್ ಮಾಡುತ್ತಿದ್ದರು. ಆಗ ಅವರ ಸಹಾಬಾಗಳಲ್ಲಿ ಒಬ್ಬರು ಹಾಗೆ ಮಾಡಿದರು. ಆಗ ಪ್ರವಾದಿ(ﷺ)ರವರು ಅವರನ್ನು ವಿರೋಧಿಸಿದಾಗ ಅವರು ಹೇಳಿದರು: ತಾವು ಹಾಗೆ ಮಾಡುತ್ತೀರಲ್ಲವೇ? ಆಗ ಪ್ರವಾದಿ(ﷺ)ರವರು ಹೇಳಿದರು:

«إِنَّكُمْ لَسْتُمْ مِثْلِي، إِنِّي أَظَلُّ عِنْدَ رَبِّي يُطْعِمُنِي وَيَسْقِينِي»

“ನೀವು ನನ್ನಂತಲ್ಲ. ನಾನು ನನ್ನ ರಬ್ಬ್‌ನ ಬಳಿಯಲ್ಲಿ, ಅವನು ನನಗೆ ತಿನ್ನಿಸುವ ಮತ್ತು ಕುಡಿಸುವ ವಿಧದಲ್ಲಿ ರಾತ್ರಿ ಕಳೆಯುತ್ತೇನೆ.” [ತಫ್ಸೀರ್ ಇಬ್ನ್ ಕಸೀರ್ 1/222]

ಇಬ್ನ್ ಜರೀರ್ ಹೀಗೆನ್ನುತ್ತಾರೆ:

“ಪ್ರವಾದಿ(ﷺ)ರವರು ಸಹರ್‌ನ ಸಮಯದ ತನಕ ಮಾತ್ರವೇ ಹೊರತು ಉಪವಾಸವನ್ನು ವಿಸಾಲ್ ಮಾಡುತ್ತಿರಲಿಲ್ಲ. ಯಾರಿಗೆ ಹೀಗೆ ಮಾಡಲು ಸಾಮರ್ಥ್ಯವಿದೆಯೋ ಅವನಿಗೆ ಹೀಗೆ ಮಾಡುವುದಕ್ಕೆ ಅನುಮತಿಯಿದೆ. ಆದರೆ ಇತರರಿಗೆ ಇದು ಕರಾಹತ್ ಆಗಿದೆ.”

ಎಲ್ಲ ರಾತ್ರಿಗಳಲ್ಲೂ ಹೀಗೆ ರೂಢಿಯಾಗಿ ಉಪವಾಸವನ್ನು ವಿಸಾಲ್ ಮಾಡುವುದು ಉಲಮಾಗಳ ಪ್ರಕಾರ ಪುಣ್ಯಕರ್ಮವಾಗಿದೆ ಎಂಬುದನ್ನು ಅವರು ನಿಷೇಧಿಸುತ್ತಾರೆ. ಅವರು ಹೇಳುತ್ತಾರೆ:

“ಕೆಲವರು ಹೀಗೆ ಆಹಾರ ಪಾನೀಯಗಳಿಂದ ದೂರವಾಗುವುದು ಉಪವಾಸವಲ್ಲದ ಬೇರೆ ಉದ್ದೇಶಕ್ಕಾಗಿರಬಹುದು. ಅದು ಒಂದೋ ಅವರಿಗೆ ಇಬಾದತ್‌ನಲ್ಲಿ ಹೆಚ್ಚು ಕ್ರಿಯಾಶೀಲತೆ ಲಭ್ಯವಾಗಲು, ಅಥವಾ ಆಹಾರದ ವಿಷಯದಲ್ಲಿ ತನ್ನ ಶರೀರಕ್ಕೆ ಆದ್ಯತೆ ನೀಡದಿರಲು, ಅಥವಾ ತನ್ನ ಆಹಾರವು ತನ್ನನ್ನು (ಇಬಾದತ್‌ನಿಂದ) ತಡೆಹಿಡಿಯಬಹುದು ಎಂಬ ಭಯದಿಂದ, ಅಥವಾ ಇನ್ನಿತರ ಉದ್ದೇಶಗಳಿಂದಾಗಿರಬಹುದು.”

ಅವರ ಮಾತಿನ ಸಾರಾಂಶವೇನೆಂದರೆ, ರಾತ್ರಿಯಲ್ಲಿ ಆಹಾರವನ್ನು ಸೇವಿಸದೆ ಬಿಟ್ಟು ನಿಲ್ಲುವುದು ಪುಣ್ಯಕರ್ಮವಾಗಿದೆ ಎಂಬ ವಿಶ್ವಾಸವಿಲ್ಲದೆ ಇಬಾದತ್‍ನಲ್ಲಿ ತನಗೆ ಕ್ರಿಯಾಶೀಲತೆ ಲಭ್ಯವಾಗುವುದಕ್ಕಾಗಿ ಯಾರಾದರೂ ವಿಸಾಲ್ ಮಾಡುವುದಾದರೆ ಅದಕ್ಕೆ ಅನುಮತಿಯಿದೆ. ಇನ್ನು ಇಬಾದತ್‍ನ ಉದ್ದೇಶದಿಂದ ಯಾರಾದರೂ ವಿಸಾಲ್ ಮಾಡುವುದಾದರೆ ಮತ್ತು ಆ ವಿಸಾಲ್ ಸಹರ್‍ನ ಸಮಯದ ತನಕ ಮಾತ್ರವಾಗಿದ್ದರೆ ಹಾಗೂ ಅವನಿಗೆ ಹಾಗೆ ಮಾಡಲು ಸಾಮರ್ಥ್ಯವಿದ್ದರೆ ಅದು ಕರಾಹತ್ ಆಗಲಾರದು. ಇಲ್ಲದಿದ್ದರೆ ಅದು ಕರಾಹತ್ ಆಗುವುದು. ಈ ಕಾರಣದಿಂದಾಗಿಯೇ ಇಮಾಮ್ ಅಹ್ಮದ್ ಮತ್ತು ಇಸ್‍ಹಾಕ್ ಹೇಳುತ್ತಾರೆ:

“ಸಹರ್‍ನ ಸಮಯದ ತನಕ ವಿಸಾಲ್ ಮಾಡುವುದು ಕರಾಹತ್ ಆಗಲಾರದು.”

ಸಹೀಹುಲ್ ಬುಖಾರಿಯಲ್ಲಿರುವ ಅಬೂ ಸಈದ್ ಅಲ್‍ಖುದ್ರೀ(ﷺ)ರವರ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

«لَا تُوَاصِلُوا، فَأَيُّكُمْ أَرَادَ أَنْ يُوَاصِلَ فَلْيُوَاصِلْ إِلَى السَّحَرِ».

“ನೀವು ವಿಸಾಲ್ ಮಾಡಬಾರದು. ಇನ್ನು ಯಾರಾದರೂ ವಿಸಾಲ್ ಮಾಡಲು ಇಚ್ಛಿಸುವುದಾದರೆ ಅವನು ಸಹರ್‍ನ ಸಮಯದ ತನಕ ವಿಸಾಲ್ ಮಾಡಲಿ.”

ಸಹಾಬಾಗಳು ಹೇಳಿದರು: “ಓ ಅಲ್ಲಾಹನ ರಸೂಲರೇ! ತಾವು ವಿಸಾಲ್ ಮಾಡುತ್ತೀರಲ್ಲವೇ?” ಆಗ ಪ್ರವಾದಿ(ﷺ)ರವರು ಹೇಳಿದರು:

«إِنِّي لَسْتُ كَهَيْئَتِكُمْ، إِنِّي أَبِيتُ لِي مُطْعِمٌ يُطْعِمُنِي وَسَاقٍ يَسْقِينِي».

“ನಾನು ನಿಮ್ಮಂತಲ್ಲ. ನಾನು ರಾತ್ರಿ ಕಳೆಯುವಾಗ ನನಗೆ ಆಹಾರ ಮತ್ತು ಪಾನೀಯ ನೀಡುವವನೊಬ್ಬನಿದ್ದಾನೆ.” [ಅಲ್‍ಬುಖಾರಿ (1963, 1967)]

ಇದರ ಬಾಹ್ಯಾರ್ಥವು ಸೂಚಿಸುವ ಪ್ರಕಾರ ಪ್ರವಾದಿ(ﷺ)ರವರು ರಾತ್ರಿಯಲ್ಲಿ ಸಂಪೂರ್ಣವಾಗಿ ವಿಸಾಲ್ ಮಾಡುತ್ತಿದ್ದರು. ಪ್ರವಾದಿ(ﷺ)ರವರು ಹೀಗೆ ಮಾಡುತ್ತಿದ್ದುದು ಬಹುಶಃ ಕೊನೆಯ ಹತ್ತು ರಾತ್ರಿಗಳಲ್ಲಿ ಹೆಚ್ಚು ಪರಿಶ್ರಮಪಡಲು ಅದು ಕ್ರಿಯಾಶೀಲತೆಯನ್ನು ನೀಡುತ್ತದೆ ಎಂಬುದರಿಂದಾಗಿರಬಹುದೇ ವಿನಾ ಅದರಿಂದಾಗಿ ಅವರ ಕರ್ಮಗಳಿಗೆ ದುಪ್ಪಟ್ಟು ಪ್ರತಿಫಲ ಲಭ್ಯವಾಗಬಹುದು ಎಂಬ ಉದ್ದೇಶದಿಂದಲ್ಲ. ಯಾಕೆಂದರೆ ಅಲ್ಲಾಹು ಅವರಿಗೆ ತಿನ್ನಿಸುತ್ತಲೂ ಕುಡಿಸುತ್ತಲೂ ಇದ್ದಾನೆ.

ಅಲ್ಲಾಹು ಪ್ರವಾದಿ(ﷺ)ರಿಗೆ ತಿನ್ನಿಸುತ್ತಲೂ ಕುಡಿಸುತ್ತಲೂ ಇದ್ದಾನೆ ಎಂಬುದರ ಅರ್ಥವೇನು ಎಂಬ ವಿಷಯದಲ್ಲಿ ವಿದ್ವಾಂಸರು ಭಿನ್ನಾಭಿಪ್ರಾಯವನ್ನು ಹೊಂದಿದ್ದಾರೆ. ಅವರಿಗೆ ಸ್ವರ್ಗದಿಂದ ಆಹಾರವನ್ನು ತಂದು ಕೊಡಲಾಗುತ್ತಿದೆ ಎಂಬುದು ಇದರ ಅರ್ಥವಾಗಿದೆಯೆಂದು ಕೆಲವರು ಹೇಳುತ್ತಾರೆ. ಆದರೆ ಇದರಲ್ಲಿ ವಿಮರ್ಶೆಯಿದೆ. ಯಾಕೆಂದರೆ ಹೀಗೆ ಅವರಿಗೆ ಆಹಾರ ಸಿಗುತ್ತಿದೆಯೆಂದಾದರೆ ಅವರು ಉಪವಾಸವನ್ನು ವಿಸಾಲ್ ಮಾಡುತ್ತಿದ್ದರು ಎಂದು ಹೇಳಲು ಸಾಧ್ಯವಿಲ್ಲ. ಆದರೆ "ಓ ಪ್ರವಾದಿಯವರೇ! ತಾವು ವಿಸಾಲ್ ಮಾಡುತ್ತೀರಲ್ಲವೇ?" ಎಂಬ ಸಹಾಬಾಗಳ ಪ್ರಶ್ನೆಯನ್ನು ಅವರು ದೃಢೀಕರಿಸಿದ್ದಾರೆ. (ಅಂದರೆ ನಾನು ವಿಸಾಲ್ ಮಾಡುತ್ತಿಲ್ಲ ಎಂದು ಅವರು ಹೇಳಿಲ್ಲ). ಅಬ್ದುರ್ರಝ್ಝಾಕ್‌ರವರು ಇಬ್ನ್ ಜುರೈಜ್‌ರಿಂದ ಉದ್ಧರಿಸಿದ ವರದಿಯಲ್ಲಿ ಅವರು ಹೀಗೆನ್ನುತ್ತಾರೆ:

«لَعَلَّ رَبِّي يُطْعِمُنِي وَيَسْقِينِي».

"ನನ್ನ ರಬ್ಬ್ ನನಗೆ ತಿನ್ನಿಸಲೂ ಬಹುದು ಮತ್ತು ಕುಡಿಸಲೂ ಬಹುದು." [ಮುಸನ್ನಫ್ ಅಬ್ದುರ್ರಝ್ಝಾಕ್ 4/268]

ಇದು ಮುರ್ಸಲ್ ಹದೀಸ್ ಆಗಿದೆ. ಮುಸ್ಲಿಮ್‌ನಲ್ಲಿರುವ ಅನಸ್(رضي الله عنه)ರವರ ಹದೀಸಿನಲ್ಲಿ ಹೀಗಿದೆ:

«إِنِّي أَظَلُّ يُطْعِمُنِي رَبِّي وَيَسْقِينِي».

"ನನ್ನ ರಬ್ಬ್ ನನಗೆ ತಿನ್ನಿಸುತ್ತಲೂ ಕುಡಿಸುತ್ತಲೂ ಇರುವ ವಿಧದಲ್ಲಿ ನಾನು (ರಾತ್ರಿಯನ್ನು) ಕಳೆಯುತ್ತೇನೆ." [ಮುಸ್ಲಿಮ್ (1104)]

'ಝುಲ್ಲ' (ظَلَّ) ಎಂಬ ಪದವನ್ನು ಬಳಸಲಾಗುವುದು ಹಗಲಿನ ವಿಷಯದಲ್ಲಾಗಿದೆ ಎಂದು ಹೇಳಲಾಗುತ್ತದೆ. ಆದ್ದರಿಂದ ಅವರಿಗೆ ನಿಜವಾಗಿಯೂ ಆಹಾರ ಮತ್ತು ಪಾನೀಯವನ್ನು ನೀಡಲಾಗುತ್ತಿತ್ತು ಎಂದಾದರೆ (ಅವರು ಹಗಲಿನಲ್ಲಿ ಉಪವಾಸ ಆಚರಿಸುತ್ತಿರಲಿಲ್ಲ ಎಂದು ಹೇಳಬೇಕಾಗಿದೆ.) ಯಾಕೆಂದರೆ ಆಹಾರ ಸೇವಿಸುವುದು ಉಪವಾಸ ಆಚರಿಸುವುದಕ್ಕೆ ವಿರುದ್ಧವಾಗಿದೆ.

ಇದರ ಸರಿಯಾದ ಅರ್ಥವೇನೆಂದರೆ ಇದು ಅಲ್ಲಾಹು ಅವರಿಗೆ ಅವರ ಉಪವಾಸ ದಲ್ಲಿ ಮತ್ತು ಅವರ ಏಕಾಂತವಾಸದಲ್ಲಿ ಅವರ ರಬ್ಬ್‌ನೊಂದಿಗೆ ಮುನಾಜಾತ್ ಮಾಡಲು ಮತ್ತು ದಿಕ್ರ್ ಹೇಳಲು ಸಹಾಯ ಮಾಡುತ್ತಿದ್ದಾನೆ ಎಂದಾಗಿದೆ. ಅಂದರೆ ಅವನು ಅವರ ಹೃದಯದಲ್ಲಿ ಇಲಾಹೀ ಜ್ಞಾನವನ್ನು ತುಂಬಿದಾಗ ಅದು ಅವರಿಗೆ

ಆಹಾರ ಮತ್ತು ಪಾನೀಯವನ್ನು ಆವಶ್ಯಪಡದ ವಿಧದಲ್ಲಿ ಸಾಕಾಗುತ್ತಿತ್ತು. ಕವಿಯೊಬ್ಬರು ಹೇಳುತ್ತಾರೆ:

لَهَا أَحَادِيثُ مِنْ ذِكْرَاكَ يُشْغِلُهَا *** عَنِ الطَّعَامِ وَيُلْهِيهَا عَنِ الزَّادِ

"ಅವಳಿಗೆ ನಿನ್ನ ನೆನಪುಗಳ ಕೆಲವು ವೃತ್ತಾಂತಗಳಿವೆ. ಆಕೆ ಆಹಾರವನ್ನು ಆವಶ್ಯಪಡದಂತೆ ಅವು ಆಕೆಯನ್ನು ಮಗ್ನವಾಗಿಸುತ್ತವೆ ಮತ್ತು ಆಕೆ ಆಹಾರ ಸಾಮಗ್ರಿಗಳ ಬಗ್ಗೆ ಅಲಕ್ಷ್ಯಳಾಗುವಂತೆ ಮಾಡುತ್ತವೆ."

ಆರಿಫೀನ್‌ಗಳ ಹೃದಯದ ಆಹಾರವು ದಿಕ್ರ್‌ಗಳಾಗಿವೆ. ಅವು ಅವರನ್ನು ಆಹಾರ ಮತ್ತು ಪಾನೀಯವನ್ನು ಆವಶ್ಯಪಡದಂತೆ ಸಾಕಾಗಿಸುತ್ತವೆ. ಕವಿಯೊಬ್ಬರು ಹೇಳಿದರು:

أَنْتَ رَيِّي إِذَا ظَمِئْتُ إِلَى الْمَا *** ءِ وَقُوتِي إِذَا أَرَدْتُ الطَّعَامَا

"ನನಗೆ ನೀರಿಗಾಗಿ ದಾಹವಾಗುವಾಗ ನೀನು ನನಗೆ ನೀರುಣಿಸುವವನಾಗಿರುವೆ ಮತ್ತು ನಾನು ಆಹಾರವನ್ನು ಇಚ್ಛಿಸುವಾಗ ನೀನೇ ನನ್ನ ಆಹಾರವಾಗಿರುವೆ."

ಅಲ್ಲಾಹನ ಮಾರ್ಗದಲ್ಲಿ ಪರಿಶ್ರಮಪಡುವವರಿಗೆ ಹಸಿವಾದರೆ ಅವರು ಅಲ್ಲಾಹನೊಂದಿಗೆ ಮುನಾಜಾತ್ ಮಾಡಿ ಹಸಿವನ್ನು ಇಂಗಿಸುತ್ತಾರೆ. ಮುನಾಜಾತ್‌ನ ಸಿಹಿರುಚಿಯನ್ನು ತುತ್ತು ಆಹಾರಕ್ಕಾಗಿ ಮಾರುವವರ ಸ್ಥಿತಿ ಎಷ್ಟು ಶೋಚನೀಯ!

ಲೈಲತುಲ್ ಕದ್ರನ್ನು ನಿರೀಕ್ಷಿಸಲಾಗುವ ರಾತ್ರಿಗಳಲ್ಲಿ ಆಹಾರವನ್ನು (ಇಫ್ತಾರನ್ನು) ಮುಂದೂಡುವುದಕ್ಕೆ ಒತ್ತುಕೊಡಲಾಗಿದೆ. ಝಿರ್ರ್ ಇಬ್ನ್ ಹುಬೈಶ್(ﷺ) ಹೇಳುತ್ತಾರೆ:

فِي لَيْلَةِ سَبْعٍ وَعِشْرِينَ مَنِ اسْتَطَاعَ مِنْكُمْ أَنْ يُؤَخِّرَ فِطْرَهُ فَلْيَفْعَلْ وَلْيُفْطِرْ عَلَى ضَيَاحِ لَبَنٍ.

"ಇಪ್ಪತ್ತೇಳನೇ ರಾತ್ರಿಯಂದು ನಿಮ್ಮಲ್ಲಿ ಯಾರಿಗಾದರೂ ತನ್ನ ಇಫ್ತಾರನ್ನು ಮುಂದೂಡಲು ಸಾಧ್ಯವಾಗುವುದಾದರೆ ಅವನು ಹಾಗೆ ಮಾಡಲಿ ಮತ್ತು ಅವನು 'ದಯಾಹುಲ್ಲಬನ್'ನಿಂದ ಇಫ್ತಾರ್ ಮಾಡಲಿ."

ಕೆಲವರು ಇದನ್ನು ಉಬಯ್ಯ್ ಇಬ್ನ್ ಕಅ್‌ಬ್‌ರವರ ಮೂಲಕ ಪ್ರವಾದಿ(ﷺ)ರವರ ವಚನವಾಗಿ ವರದಿ ಮಾಡಿದ್ದಾರೆ. ಆದರೆ ಅದು ಸಹೀಹಲ್ಲ. 'ದಯಾಹುಲ್ಲಬನ್' ಎಂದರೆ ನೀರು ಬೆರೆಸಿದ ದಪ್ಪ ಹಾಲು.

5. ಎರಡು ಇಶಾಗಳ ಮಧ್ಯೆ (ಮಗ್ರಿಬ್ ಮತ್ತು ಇಶಾಗಳ ಮಧ್ಯೆ) ಸ್ನಾನ ಮಾಡುವುದು:

ಈಗಾಗಲೇ ಉದ್ಧರಿಸಿದ ಆಇಶಾ(ﷺ)ರವರ ಹದೀಸಿನಲ್ಲಿ ಹೀಗಿದೆ:

وَاغْتَسَلَ بَيْنَ الْأَذَانَيْنِ.

"ಪ್ರವಾದಿ(ﷺ)ರವರು ಎರಡು ಅದಾನ್‌ಗಳ ಮಧ್ಯೆ ಸ್ನಾನ ಮಾಡಿದರು."

ಇದರ ಉದ್ದೇಶ ಮಗ್ರಿಬ್ ಹಾಗೂ ಇಶಾ ಅದಾನ್‌ಗಳಾಗಿವೆ. ಹುದೈಫಃ(ﷺ)ರಿಂದ ವರದಿಯಾಗಿರುವ ಪ್ರಕಾರ ಅವರು ರಮದಾನ್ ತಿಂಗಳ ಒಂದು ರಾತ್ರಿಯಲ್ಲಿ ಪ್ರವಾದಿ(ﷺ)ರವರ ಜೊತೆಗೆ ನಮಾಝ್ ಮಾಡಿದರು. ಆಗ ಪ್ರವಾದಿ(ﷺ)ರವರು ಸ್ನಾನ ಮಾಡಿದರು. ಹುದೈಫಃ(ﷺ)ರವರು ಅವರಿಗೆ ಪರದೆಯನ್ನು ಅಡ್ಡ ಹಿಡಿದರು. ಪ್ರವಾದಿ(ﷺ)ರವರು ಸ್ನಾನ ಮಾಡಿ ಉಳಿದ ನೀರಿನಲ್ಲಿ ಹುದೈಫಃ(ﷺ) ಸ್ನಾನ ಮಾಡಿದರು ಮತ್ತು ಪ್ರವಾದಿ(ﷺ)ರವರು ಅವರಿಗೆ ಪರದೆಯನ್ನು ಅಡ್ಡ ಹಿಡಿದರು. ಇದನ್ನು ಇಬ್ನ್ ಅಬೀ ಆಸಿಮ್ ಉದ್ಧರಿಸಿದ್ದಾರೆ. ಹುದೈಫಃ(ﷺ)ರಿಂದ ವರದಿಯಾದ ಇನ್ನೊಂದು ವರದಿಯಲ್ಲಿ ಹೀಗಿದೆ:

نَامَ النَّبِيُّ صَلَّى اللَّهُ عَلَيْهِ وَسَلَّمَ ذَاتَ لَيْلَةٍ مِنْ رَمَضَانَ فِي حُجْرَةٍ مِنْ جَرِيدِ النَّخْلِ، فَصَبَّ عَلَيْهِ دَلْوًا مِنْ مَاءٍ.

"ರಮದಾನ್‌ನ ಒಂದು ರಾತ್ರಿ ಪ್ರವಾದಿ(ﷺ)ರವರು ಖರ್ಜೂರದ ಗರಿಯಿಂದ ನಿರ್ಮಿಸಲಾದ ಕೊಠಡಿಯಲ್ಲಿ ನಿದ್ದೆ ಮಾಡಿದರು. ತರುವಾಯ ಅವರು ತಮ್ಮ ಮೇಲೆ ಒಂದು ತೊಟ್ಟಿ ನೀರನ್ನು ಸುರಿದರು."

ಇಬ್ನ್ ಜರೀರ್ ಹೇಳುತ್ತಾರೆ:

"ಕೊನೆಯ ಹತ್ತು ರಾತ್ರಿಗಳಲ್ಲಿ ಸಲಫ್‌ಗಳು ಪ್ರತಿ ರಾತ್ರಿಯಲ್ಲೂ ಸ್ನಾನ ಮಾಡುವುದನ್ನು ಇಷ್ಟಪಡುತ್ತಿದ್ದರು."

ಇಬ್ರಾಹೀಮ್ ಅನ್ನಖಈ ಕೊನೆಯ ಹತ್ತರ ಪ್ರತಿ ರಾತ್ರಿಯಲ್ಲೂ ಸ್ನಾನ ಮಾಡುತ್ತಿದ್ದರು. ಅವರ ಪೈಕಿ ಕೆಲವರು ಲೈಲತುಲ್ ಕದ್ರನ್ನು ನಿರೀಕ್ಷಿಸಲಾಗುವ ರಾತ್ರಿಗಳಲ್ಲಿ ಸ್ನಾನ ಮಾಡಿ ಸುಗಂಧ ಹಚ್ಚುತ್ತಿದ್ದರು. ರಮದಾನ್ ತಿಂಗಳ ಇಪ್ಪತ್ತೇಳನೇ ರಾತ್ರಿಯಂದು ಸ್ನಾನ ಮಾಡುವಂತೆ ಝಿರ್ರ್ ಇಬ್ನ್ ಹುಬೈಶ್(ﷺ) ಆದೇಶ ನೀಡುತ್ತಿದ್ದರು.

ಇಪ್ಪತ್ತನಾಲ್ಕನೆ ರಾತ್ರಿಯು ಬರುವಾಗ ಅನಸ್ ಇಬ್ನ್ ಮಾಲಿಕ್(ﷺ)ರವರು ಸ್ನಾನ ಮಾಡಿ, ಸುಗಂಧವನ್ನು ಹಚ್ಚಿ, ಇಝಾರ್ ಮತ್ತು ರಿದಾಅನ್ನು ತೊಡುತ್ತಿದ್ದರು ಹಾಗೂ ಬೆಳಗಾದರೆ ಅವರು ಅದನ್ನು ಮಡಚಿಡುತ್ತಿದ್ದರು ಮತ್ತು ಮುಂದಿನ ವರ್ಷ ಅದೇ ರಾತ್ರಿಯ ತನಕ ಅವರು ಅದನ್ನು ಧರಿಸುತ್ತಿರಲಿಲ್ಲ. ಅಯ್ಯೂಬ್ ಅಸ್ಸಖ್ತಿಯಾನೀ ಇಪ್ಪತ್ತಮೂರನೇ ಮತ್ತು ಇಪ್ಪತ್ತನಾಲ್ಕನೇ ರಾತ್ರಿಯಲ್ಲಿ ಸ್ನಾನ ಮಾಡಿ ಎರಡು ಹೊಸ ಉಡುಪುಗಳನ್ನು ಧರಿಸಿ ಲೋಬಾನ ಹಚ್ಚುತ್ತಿದ್ದರು. ಅವರು ಹೇಳುತ್ತಿದ್ದರು: ಇಪ್ಪತ್ತಮೂರನೇ ರಾತ್ರಿ ಮದೀನಾ ನಿವಾಸಿಗಳ ರಾತ್ರಿಯಾಗಿದೆ ಮತ್ತು ಅದರ ನಂತರದ ರಾತ್ರಿ ನಮ್ಮ ರಾತ್ರಿಯಾಗಿದೆ. ಅಂದರೆ ಬಸ್ರಾ ನಿವಾಸಿಗಳ ರಾತ್ರಿ. ಹಮ್ಮಾದ್ ಇಬ್ನ್ ಸಲಮಃ ಹೇಳುತ್ತಾರೆ: ಲೈಲತುಲ್ ಕದ್ರನ್ನು ನಿರೀಕ್ಷಿಸಲಾಗುವ ರಾತ್ರಿಗಳಲ್ಲಿ ಸಾಬಿತ್ ಅಲ್‌ಬುನಾನೀ ಮತ್ತು ಹುಮೈದ್ ಅತ್ತವೀಲ್ ತಮ್ಮ ಉಡುಪುಗಳಲ್ಲಿ ಅತ್ಯುತ್ತಮವಾಗಿರುವುದನ್ನು ಧರಿಸಿ ಸುಗಂಧ ಹಚ್ಚುತ್ತಿದ್ದರು ಮತ್ತು ಮಸೀದಿಯನ್ನು ಊದು ಲೋಬಾನಗಳ ಹೊಗೆಯಿಂದ ಪರಿಮಳಗೊಳಿಸುತ್ತಿದ್ದರು. ಸಾಬಿತ್ ಹೇಳುತ್ತಾರೆ: ತಮೀಮ್ ಅದ್ದಾರೀ(ﷺ)ರವರಲ್ಲಿ ಒಂದು ಉಡುಪು ಇತ್ತು. ಅವರು ಅದನ್ನು ಸಾವಿರ ದಿರ್ಹಮ್ ಕೊಟ್ಟು ಖರೀದಿಸಿದ್ದರು. ಅವರು ಅದನ್ನು ಲೈಲತುಲ್ ಕದ್ರನ್ನು ನಿರೀಕ್ಷಿಸಲಾಗುವ ರಾತ್ರಿಗಳಲ್ಲಿ ಧರಿಸುತ್ತಿದ್ದರು.

ಇದರಿಂದ ಸ್ಪಷ್ಟವಾಗುವ ಪ್ರಕಾರ ಲೈಲತುಲ್ ಕದ್ರನ್ನು ನಿರೀಕ್ಷಿಸಲಾಗುವ ರಾತ್ರಿಗಳಲ್ಲಿ ಸ್ನಾನದ ಮೂಲಕ ಶುಚಿಯಾಗುವುದು, ಉತ್ತಮ ಉಡುಪು ಧರಿಸುವ ಮೂಲಕ ಅಲಂಕೃತನಾಗುವುದು ಮತ್ತು ಸುಗಂಧವನ್ನು ಹಚ್ಚುವ ಮೂಲಕ ಪರಿಮಳ ಪೂರಿತನಾಗುವುದು ಅಪೇಕ್ಷಣೀಯವಾಗಿದೆ. ಜನರು ಸಮ್ಮೇಳನಗೊಳ್ಳುವಾಗ ಮತ್ತು ಈದ್‌ಗಳ ಸಂದರ್ಭಗಳಲ್ಲಿ ಹೀಗೆ ಮಾಡುವುದನ್ನು ಶರೀಅತ್‌ನಲ್ಲಿ ಒಳಪಡಿಸ ಲಾಗಿರುವಂತೆ ಲೈಲತುಲ್ ಕದ್ರನ್ನು ನಿರೀಕ್ಷಿಸಲಾಗುವ ರಾತ್ರಿಗಳಲ್ಲೂ ಹೀಗೆ ಮಾಡುವುದನ್ನು ಶರೀಅತ್‌ನಲ್ಲಿ ಒಳಪಡಿಸಲಾಗಿದೆ. ಮಾತ್ರವಲ್ಲ ಎಲ್ಲ ನಮಾಝ್‌ಗಳ ಸಂದರ್ಭದಲ್ಲೂ ಉತ್ತಮ ಉಡುಪು ಧರಿಸಿ ಅಲಂಕೃತನಾಗುವುದು ಕೂಡ ಶರೀಅತ್‌ನಲ್ಲಿ ಒಳಗೊಂಡದ್ದಾಗಿದೆ. ಅಲ್ಲಾಹು ತಆಲಾ ಹೇಳುತ್ತಾನೆ:

﴿ خُذُوا زِينَتَكُمْ عِندَ كُلِّ مَسْجِدٍ ﴾

"ಪ್ರತಿಯೊಂದು ಆರಾಧನಾಲಯಗಳಲ್ಲೂ (ಅಥವಾ ಪ್ರತಿಯೊಂದು ಆರಾಧನಾ ವೇಳೆಗಳಲ್ಲೂ) ನಿಮಗೆ ಅಲಂಕಾರವಾಗುವ ಉಡುಪುಗಳನ್ನು ಧರಿಸಿರಿ." [ಅಲ್‌ಅಅ್‌ರಾಫ್ 31]

ಇಬ್ನ್ ಉಮರ್‌ರವರು ಹೇಳುತ್ತಾರೆ:

اللَّهُ أَحَقُّ أَنْ يُتَزَيَّنَ لَهُ.

"(ನಾವು) ಯಾರಿಗಾದರೂ ಅಲಂಕೃತರಾಗುವುದಾದರೆ ಅದಕ್ಕೆ ಹೆಚ್ಚು ಅರ್ಹನಾಗಿರುವುದು ಅಲ್ಲಾಹನಾಗಿದ್ದಾನೆ."

ಇದು ಪ್ರವಾದಿ(ﷺ)ರವರ ವಚನವಾಗಿಯೂ ಅವರಿಂದ ವರದಿಯಾಗಿದೆ.

ತೌಬಾದ ಮೂಲಕ ಮತ್ತು ಅಲ್ಲಾಹನೆಡೆಗೆ ಪಶ್ಚಾತ್ತಾಪಪಟ್ಟು ಮರಳುವ ಮೂಲಕ ಮತ್ತು ಪಾಪಗಳ ಮ್ಲೇಚ್ಛತೆ ಹಾಗೂ ಹೊಲಸಿನಿಂದ ಶುದ್ಧವಾಗುವ ಮೂಲಕ ಆಂತರಿಕವಾಗಿ ಅಲಂಕೃತರಾಗುವುದನ್ನು ಬಿಟ್ಟು ಕೇವಲ ಬಾಹ್ಯವಾಗಿ ಅಲಂಕೃತರಾಗುವುದರಿಂದ ಅಲಂಕೃತವಾಗುವ ಉದ್ದೇಶವು ಪೂರ್ಣವಾಗಲಾರದು. ಯಾಕೆಂದರೆ ಆಂತರಿಕ ಧ್ವಂಸದೊಂದಿಗೆ ಬಾಹ್ಯವಾಗಿ ಅಲಂಕೃತರಾಗುವುದರಿಂದ ಯಾವುದೇ ಪ್ರಯೋಜನವಿಲ್ಲ. ಅಲ್ಲಾಹು ಹೇಳುತ್ತಾನೆ:

﴿ يَا بَنِي آدَمَ قَدْ أَنْزَلْنَا عَلَيْكُمْ لِبَاسًا يُوَارِي سَوْآتِكُمْ وَرِيشًا وَلِبَاسُ التَّقْوَىٰ ذَٰلِكَ خَيْرٌ ﴾

"ಓ ಆದಮ್ ಸಂತತಿಗಳೇ! ನಿಮ್ಮ ಗುಹ್ಯಭಾಗಗಳನ್ನು ಮರೆಮಾಚುವ ಉಡುಪನ್ನು ಮತ್ತು ಅಲಂಕಾರ ವಸ್ತ್ರವನ್ನು ನಾವು ನಿಮಗೆ ನೀಡಿರುವೆವು. ತಕ್ವಾದ ಉಡುಪು ಯಾವುದೋ ಅದು ಅತ್ಯುತ್ತಮವಾದುದಾಗಿದೆ." [ಅಲ್‌ಅಅ್‌ರಾಫ್ 26]

ಕವಿಯೊಬ್ಬರು ಹೇಳುತ್ತಾರೆ:

إِذَا الْمَرْءُ لَمْ يَلْبَسْ ثِيَابًا مِنَ التُّقَى * تَقَلَّبَ عُرْيَانًا وَإِنْ كَانَ كَاسِيَا

"ಒಬ್ಬ ವ್ಯಕ್ತಿ ತಕ್ವಾದಿಂದಿರುವ ಉಡುಪನ್ನು ಧರಿಸದಿದ್ದರೆ ಅವನು ಉಡುಪನ್ನು ಧರಿಸಿದ್ದರೂ ಅವನು ನಗ್ನನಾಗಿ ಹೊರಳುತ್ತಿದ್ದಾನೆ."

ದೊರೆಗಳೊಂದಿಗೆ ಏಕಾಂತದಲ್ಲಿ ಸಂಭಾಷಣೆ ಮಾಡುವಾಗ ಆಂತರಿಕವಾಗಿ ಮತ್ತು ಬಾಹ್ಯವಾಗಿ ಅಲಂಕೃತನಾಗುವುದು ಆವಶ್ಯಕವಾಗಿರುವಾಗ ಅಂತರಂಗ ಮತ್ತು ಬಹಿರಂಗವನ್ನು ಅರಿಯುವ ದೊರೆಗಳ ದೊರೆಯೊಂದಿಗೆ (ಅಲ್ಲಾಹನೊಂದಿಗೆ) ಸಂಭಾಷಣೆ ಮಾಡುವಾಗ ಅಂತರಂಗ ಮತ್ತು ಬಹಿರಂಗವನ್ನು ಅತ್ಯಧಿಕ ಶುದ್ಧವಾಗಿಡಬೇಕಾಗಿದೆ. ಯಾಕೆಂದರೆ ಅವನು ನಿಮ್ಮ ರೂಪಗಳನ್ನು ನೋಡುವುದಿಲ್ಲ. ಅವನು

ನೋಡುವುದು ನಿಮ್ಮ ಹೃದಯ ಮತ್ತು ಕರ್ಮಗಳನ್ನಾಗಿದೆ. ಆದ್ದರಿಂದ ಅಲ್ಲಾಹನ ಮುಂದೆ ನಿಲ್ಲುವವನು ಉತ್ತಮ ಉಡುಪುಗಳೊಂದಿಗೆ ತನ್ನ ಬಾಹ್ಯವನ್ನು ಮತ್ತು ತಕ್ವಾದ ಉಡುಪಿನೊಂದಿಗೆ ತನ್ನ ಆಂತರ್ಯವನ್ನು ಅಲಂಕರಿಸಬೇಕಾಗಿದೆ.

6. ಇಅ್‌ತಿಕಾಫ್ ನಿರ್ವಹಿಸುವುದು:

ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಆಇಶಾ(ﷺ)ರವರ ಹದೀಸಿನಲ್ಲಿ ಹೀಗಿದೆ:

أَنَّ النَّبِيَّ صَلَّى اللَّهُ عَلَيْهِ وَسَلَّمَ كَانَ يَعْتَكِفُ الْعَشْرَ الْأَوَاخِرَ مِنْ رَمَضَانَ حَتَّى تَوَفَّاهُ اللَّهُ تَعَالَى.

"ಪ್ರವಾದಿ(ﷺ)ರವರು ರಮದಾನ್ ತಿಂಗಳ ಕೊನೆಯ ಹತ್ತರಲ್ಲಿ ಅಲ್ಲಾಹು ಅವರನ್ನು ಮೃತಪಡಿಸುವ ತನಕ ಇಅ್‌ತಿಕಾಫ್ ನಿರ್ವಹಿಸುತ್ತಿದ್ದರು." [ಅಲ್‌ಬುಖಾರಿ 4/271, 4/283; ಮುಸ್ಲಿಮ್ (1153)]

ಸಹೀಹುಲ್ ಬುಖಾರಿಯಲ್ಲಿರುವ ಅಬೂ ಹುರೈರಃ(ﷺ)ರವರ ಹದೀಸಿನಲ್ಲಿ ಹೀಗಿದೆ:

كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يَعْتَكِفُ فِي كُلِّ رَمَضَانَ عَشَرَةَ أَيَّامٍ، فَلَمَّا كَانَ الْعَامُ الَّذِي قُبِضَ فِيهِ اعْتَكَفَ عِشْرِينَ.

"ಪ್ರವಾದಿ(ﷺ)ರವರು ಎಲ್ಲ ರಮದಾನ್ ತಿಂಗಳುಗಳಲ್ಲೂ ಹತ್ತು ದಿನ ಇಅ್‌ತಿಕಾಫ್ ನಿರ್ವಹಿಸುತ್ತಿದ್ದರು. ಅವರು ಮರಣಹೊಂದಿದ ವರ್ಷದಲ್ಲಿ ಅವರು ಇಪ್ಪತ್ತು ದಿನ ಇಅ್‌ತಿಕಾಫ್ ನಿರ್ವಹಿಸಿದರು." [ಅಲ್‌ಬುಖಾರಿ 4/284]

ಪ್ರವಾದಿ(ﷺ)ರವರು ಇಅ್‌ತಿಕಾಫ್ ನಿರ್ವಹಿಸುತ್ತಿದ್ದ ಹತ್ತು ದಿನಗಳು ಕೊನೆಯ ಹತ್ತು ದಿನಗಳಾಗಿದ್ದವು. ಆ ದಿನಗಳಲ್ಲಿ ಅವರು ತಮ್ಮ ಕೆಲಸ ಕಾರ್ಯಗಳೆಲ್ಲವನ್ನೂ ಬದಿಗಿಟ್ಟು, ಆ ರಾತ್ರಿಗಳಿಗೆ ಸಂಪೂರ್ಣ ಬಿಡುವು ಮಾಡಿಕೊಂಡು ತಮ್ಮ ರಬ್ಬ್‌ನೊಂದಿಗೆ ಮುನಾಜಾತ್ (ಸಂಭಾಷಣೆ) ಮಾಡುವುದರಲ್ಲಿ, ದಿಕ್ರ್ ಮತ್ತು ದುಆ ಮಾಡುವುದರಲ್ಲಿ ನಿರತರಾಗುತ್ತಿದ್ದರು. ಅವರೊಂದು ಚಾಪೆಯನ್ನು ಅಡ್ಡವಾಗಿಟ್ಟು ಜನರಿಂದ ಏಕಾಂತವಾಗುತ್ತಿದ್ದರು. ಅವರು ಜನರೊಂದಿಗೆ ಬೆರೆಯುವುದಾಗಲಿ, ಮಗ್ನರಾಗುವುದಾಗಲಿ ಮಾಡುತ್ತಿರಲಿಲ್ಲ. ಈ ಕಾರಣದಿಂದಾಗಿಯೇ ಇಅ್‌ತಿಕಾಫ್ ನಿರ್ವಹಿಸುವವನು ಜನರೊಂದಿಗೆ ಬೆರೆಯುವುದು –ಅದು ಇಲ್ಮ್ ಕಲಿಸುವುದಕ್ಕಾಗಿರಲಿ

ಅಥವಾ ಕುರ್‌ಆನ್ ಕಲಿಸುವುದಕ್ಕಾಗಿರಲಿ– ಅಪೇಕ್ಷಣೀಯವಲ್ಲವೆಂದು ಇಮಾಮ್ ಅಹ್ಮದ್ ಅಭಿಪ್ರಾಯಪಟ್ಟಿದ್ದಾರೆ. ಬದಲಾಗಿ ಅತ್ಯಂತ ಶ್ರೇಷ್ಠವಾಗಿರುವುದು ಏಕಾಂಗಿಯಾಗಿದ್ದುಕೊಂಡು ಅಲ್ಲಾಹನೊಂದಿಗೆ ಮುನಾಜಾತ್ ಮಾಡುವುದು ಹಾಗೂ ದಿಕ್ರ್ ಮತ್ತು ದುಆ ಮಾಡುತ್ತಿರುವುದಾಗಿದೆ. ಈ ಇಅ್‌ತಿಕಾಫ್ ಶರೀಅತ್ ನಿರ್ದೇಶಿಸಿದ ರೀತಿಯಲ್ಲಿರುವ ಏಕಾಂಗಿತನವಾಗಿರಬೇಕಾಗಿದೆ.

ಇಅ್‌ತಿಕಾಫ್ ನಿರ್ವಹಿಸಬೇಕಾದುದು ಜುಮುಅಃ ಜಮಾಅತ್‌ಗಳು ಜರುಗುವ ಮಸೀದಿಗಳಲ್ಲಿ ಮಾತ್ರವಾಗಿದೆ. ಯಾಕೆಂದರೆ ಜುಮುಅ ಜಮಾಅತ್‌ಗಳಲ್ಲಿ ಪಾಲ್ಗೊಳ್ಳದೆ ಏಕಾಂತವಾಗಿ ಕಳೆಯುವುದು ವಿರೋಧಿಸಲ್ಪಟ್ಟ ಸಂಗತಿಯಾಗಿದೆ. ಹಗಲು ಪೂರ್ತಿ ಉಪವಾಸ ಆಚರಿಸುವ ಮತ್ತು ರಾತ್ರಿ ಪೂರ್ತಿ ನಮಾಝ್ ಮಾಡುವ, ಆದರೆ ಜುಮುಅಃ ಜಮಾಅತ್‌ಗಳಲ್ಲಿ ಪಾಲ್ಗೊಳ್ಳದ ಒಬ್ಬ ವ್ಯಕ್ತಿಯ ಬಗ್ಗೆ ಇಬ್ನ್ ಅಬ್ಬಾಸ್ (ﷺ)ರೊಂದಿಗೆ ಕೇಳಲಾದಾಗ ಅವರು ಹೇಳಿದರು: "ಆತ ನರಕದಲ್ಲಾಗಿದ್ದಾನೆ."

ಈ ಸಮುದಾಯಕ್ಕೆ ಶರೀಅತ್ ನಿರ್ದೇಶಿಸಿದ ಏಕಾಂತವಾಸವು ಇಅ್‌ತಿಕಾಫ್ ಆಗಿದೆ. ಅದನ್ನು ಪ್ರವಾದಿ(ﷺ)ರವರು ನಿರ್ವಹಿಸುತ್ತಿದ್ದಂತೆ ಮಸೀದಿಗಳಲ್ಲಿ ವಿಶೇಷವಾಗಿ ರಮದಾನ್ ತಿಂಗಳಲ್ಲಿ, ಅದರಲ್ಲೂ ವಿಶೇಷವಾಗಿ ಕೊನೆಯ ಹತ್ತರಲ್ಲಿ ನಿರ್ವಹಿಸಬೇಕಾಗಿದೆ. ಇಅ್‌ತಿಕಾಫ್ ನಿರ್ವಹಿಸುವವನು ಅಲ್ಲಾಹನ ಆಜ್ಞಾಪಾಲನೆ ಮಾಡುವುದಕ್ಕಾಗಿ ಮತ್ತು ದಿಕ್ರ್‌ಗಾಗಿ ತನ್ನ ಶರೀರವನ್ನು ತಡೆಹಿಡಿಯುವವನಾಗಿದ್ದಾನೆ. ಅವನು ತನ್ನ ಮನಸ್ಸಿನಿಂದ ಎಲ್ಲ ರೀತಿಯ ವಿಚಾರಗಳನ್ನೂ ನಿವಾರಿಸಿ ತನ್ನ ಹೃದಯದ ಮೂಲಕ ಇಅ್‌ತಿಕಾಫ್ ನಿರ್ವಹಿಸಿ ತನ್ನ ರಬ್ಬ್‌ನೆಡೆಗೆ ತಿರುಗುತ್ತಾನೆ ಮತ್ತು ಅವನಿಗೆ ಹತ್ತಿರವಾಗುತ್ತಾನೆ. ಅವನ ಉದ್ದೇಶವು ಅಲ್ಲಾಹು ಮತ್ತು ಅವನು ಇಷ್ಟಪಡುವ ವಿಷಯಗಳು ಮಾತ್ರವಾಗಿರುತ್ತವೆ.

ಆದ್ದರಿಂದ ಇಅ್‌ತಿಕಾಫ್ ಎಂಬುದರ ನಿಜವಾದ ಅರ್ಥವು ಹೀಗಿದೆ:

قَطْعُ الْعَلَائِقِ عَنِ الْخَلَائِقِ بِخِدْمَةِ الْخَالِقِ.

"ಸೃಷ್ಟಿಕರ್ತನ ಸೇವೆ ಮಾಡುವುದಕ್ಕಾಗಿ ಸೃಷ್ಟಿಗಳೊಂದಿಗಿರುವ ಎಲ್ಲ ಸಂಪರ್ಕಗಳನ್ನೂ ಕಡಿಯುವುದು."

ಅಲ್ಲಾಹನ ಬಗ್ಗೆಯಿರುವ ಅರಿವು, ಅವನಲ್ಲಿರುವ ಪ್ರೀತಿ ಮತ್ತು ಅವನೊಂದಿಗಿರುವ ಉಲ್ಲಾಸವು ಶಕ್ತಿ ಪಡೆದಂತೆಲ್ಲಾ ಎಲ್ಲ ಸ್ಥಿತಿಯಲ್ಲೂ ಅಲ್ಲಾಹನಿಗೆ ಸಂಪೂರ್ಣವಾಗಿ ಏಕಾಂತಗೊಳ್ಳಲು ಅವು ಆತನಿಗೆ ನೆರವಾಗುತ್ತದೆ.

ಓ ಲೈಲತುಲ್ ಕದ್ರ್! ಇಬಾದತ್ ಮಾಡುವವರಿಗಾಗಿ ಸಾಕ್ಷಿಯಾಗು! ಓ ಭಯಭಕ್ತಿ ಪಾಲಿಸುವವರ ಕಾಲುಗಳೇ! ನಿಮ್ಮ ರಬ್ಬ್‌ಗಾಗಿ ರುಕೂಅ್ ಮತ್ತು ಸುಜೂದ್ ನಿರ್ವಹಿಸಿರಿ! ಓ ಬೇಡುವವರ ನಾಲಗೆಗಳೇ! ಬೇಡುವುದಕ್ಕಾಗಿ ಪರಿಶ್ರಮಪಡಿರಿ!
ಕವಿಯೊಬ್ಬರು ಹೇಳಿದರು:

يَا رِجَالَ اللَّيْلِ جِدُّوا رُبَّ دَاعٍ لَا يُرَدُّ *** مَا يَقُومُ اللَّيْلَ إِلَّا مَنْ لَهُ عَزْمٌ وَجِدُّ

"ಓ ರಾತ್ರಿಯ ಜನರೇ! ಪರಿಶ್ರಮಪಡಿರಿ. ಬಹುಶಃ ಪ್ರಾರ್ಥಿಸುವವನ ಪ್ರಾರ್ಥನೆಯು ತಿರಸ್ಕರಿಸಲ್ಪಡದು. ರಾತ್ರಿಯಲ್ಲಿ ಯಾರೂ ನಮಾಝ್ ಮಾಡಲಾರರು; ದೃಢನಿಶ್ಚಯ ಮತ್ತು ಪರಿಶ್ರಮವಿರುವ ವ್ಯಕ್ತಿಯ ಹೊರತು."
ಓ ತನ್ನ ಆಯುಷ್ಯವನ್ನು ವ್ಯರ್ಥಗೊಳಿಸಿದವನೇ! ನಿನಗೆ ನಷ್ಟವಾಗಿರುವುದನ್ನು ಲೈಲತುಲ್ ಕದ್ರ್‌ನಲ್ಲಿ ಪಡೆದುಕೋ! ಯಾಕೆಂದರೆ ಅದರಲ್ಲಿ ಒಂದು ಜೀವಿತಕಾಲಕ್ಕೆ ಸಾಕಾಗುವಷ್ಟಿದೆ!
ಅಲ್ಲಾಹು ಹೇಳುತ್ತಾನೆ:

﴿إِنَّا أَنْزَلْنَاهُ فِي لَيْلَةِ الْقَدْرِ * وَمَا أَدْرَاكَ مَا لَيْلَةُ الْقَدْرِ * لَيْلَةُ الْقَدْرِ خَيْرٌ مِنْ أَلْفِ شَهْرٍ﴾

"ಖಂಡಿತವಾಗಿಯೂ ನಾವು ಇದನ್ನು (ಕುರ್‌ಆನನ್ನು) ಲೈಲತುಲ್ ಕದ್ರ್‌ನಲ್ಲಿ ಅವತೀರ್ಣಗೊಳಿಸಿರುವೆವು. ಲೈಲತುಲ್ ಕದ್ರ್ ಎಂದರೆ ಏನೆಂದು ತಮಗೆ ಗೊತ್ತಿದೆಯೇ? ಲೈಲತುಲ್ ಕದ್ರ್ ಸಾವಿರ ಮಾಸಗಳಿಗಿಂತಲೂ ಶ್ರೇಷ್ಠವಾಗಿದೆ." [ಅಲ್‌ಕದ್ರ್ 1–3]
ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಅಬೂ ಹುರೈರಃ (ﷺ)ರವರ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

«مَنْ قَامَ لَيْلَةَ الْقَدْرِ إِيمَانًا وَاحْتِسَابًا غُفِرَ لَهُ مَا تَقَدَّمَ مِنْ ذَنْبِهِ».

"ಲೈಲತುಲ್ ಕದ್ರ್‌ನಲ್ಲಿ ಈಮಾನ್‌ನಿಂದ ಮತ್ತು ಪ್ರತಿಫಲಾಪೇಕ್ಷೆಯಿಂದ ಯಾರಾದರೂ ನಮಾಝ್ ಮಾಡಿದರೆ ಅವನ ಗತ ಪಾಪಗಳನ್ನು ಕ್ಷಮಿಸಿಬಿಡಲಾಗುವುದು." [ಅಲ್‌ಬುಖಾರಿ 4/250; ಮುಸ್ಲಿಮ್ (759)]
ಮುಸ್ನದ್‌ನಲ್ಲಿರುವ ಉಬಾದಃ ಇಬ್ನು ಸ್ವಾಮಿತ್(ﷺ)ರವರ ಹದೀಸಿನಲ್ಲಿ ಪ್ರವಾದಿ (ﷺ)ರವರು ಹೇಳುತ್ತಾರೆ:

«مَنْ قَامَهَا ابْتِغَاءَهَا ثُمَّ وَقَعَتْ لَهُ غُفِرَ لَهُ مَا تَقَدَّمَ مِنْ ذَنْبِهِ وَمَا تَأَخَّرَ».

“ಯಾರು ಅದರಲ್ಲಿ ಅದನ್ನು (ಲೈಲತುಲ್ ಕದ್ರ್) ಹುಡುಕುತ್ತಾ ನಮಾಝ್ ಮಾಡುತ್ತಾನೋ, ತರುವಾಯ ಅದು ಅವನಿಗೆ ಲಭ್ಯವಾಗುವುದೋ, ಅವನ ಗತ ಪಾಪಗಳನ್ನು ಮತ್ತು ಮುಂಬರುವ ಪಾಪಗಳನ್ನು ಕ್ಷಮಿಸಿಬಿಡಲಾಗುವುದು.” [ಮುಸ್ನದ್ ಅಹ್ಮದ್ 5/318]

ಮುಸ್ನದ್ ಮತ್ತು ಅನ್ನಸಾಈಯಲ್ಲಿರುವ ಅಬೂ ಹುರೈರಃ(ﷺ)ರವರ ಹದೀಸಿನಲ್ಲಿ ರಮದಾನ್ ತಿಂಗಳ ಬಗ್ಗೆ ಪ್ರವಾದಿ(ﷺ)ರವರು ಹೀಗೆನ್ನುತ್ತಾರೆ:

«فِيهِ لَيْلَةٌ خَيْرٌ مِنْ أَلْفِ شَهْرٍ مَنْ حُرِمَ خَيْرُهَا فَقَدْ حُرِمَ».

“ಅದರಲ್ಲಿ ಸಾವಿರ ತಿಂಗಳುಗಳಿಗಿಂತಲೂ ಶ್ರೇಷ್ಠವಾದ ಒಂದು ರಾತ್ರಿಯಿದೆ. ಯಾರಿಗೆ ಅದರ ಒಳಿತನ್ನು ನಿಷೇಧಿಸಲಾಗುತ್ತದೋ ಅವನಿಗೆ ಎಲ್ಲವನ್ನೂ ನಿಷೇಧಿಸಲಾಗಿದೆ.” [ಮುಸ್ನದ್ ಅಹ್ಮದ್ 2/230; ಅನ್ನಸಾಈ 4/129]

ಜುವೈಬಿರ್ ಹೇಳುತ್ತಾರೆ: ನಾನು ಅದ್ದಹ್ಹಾಕ್‌ರೊಂದಿಗೆ ಕೇಳಿದೆ: ಹೆರಿಗೆ ರಕ್ತವಿರುವವರು, ಋತುಸ್ರಾವವಿರುವವರು, ಯಾತ್ರಿಕರು ಮತ್ತು ನಿದ್ದೆ ಮಾಡಿದವರ ಸ್ಥಿತಿಯೇನು? ಅವರಿಗೆ ಲೈಲತುಲ್ ಕದ್ರ್‌ನ ಪಾಲು ಸಿಗುವುದೇ? ಅವರು ಹೇಳಿದರು: “ಹೌದು! ಯಾರ ಅಮಲ್‌ಗಳನ್ನು ಅಲ್ಲಾಹು ಸ್ವೀಕರಿಸುತ್ತಾನೋ ಅವನಿಗೆ ಲೈಲತುಲ್ ಕದ್ರ್‌ನಿಂದಿರುವ ಒಂದು ಪಾಲನ್ನು ನೀಡುತ್ತಾನೆ.”

ಆದ್ದರಿಂದ ಓ ಸಹೋದರರೇ! ನಾವು ಅವಲಂಬಿತರಾಗಬೇಕಾದುದು ಅಲ್ಲಾಹು ನಮ್ಮ ಕರ್ಮಗಳನ್ನು ಸ್ವೀಕರಿಸಬೇಕು ಎಂಬುದರಲ್ಲಾಗಿದೆಯೇ ಹೊರತು ಕೇವಲ ಪರಿಶ್ರಮ ಪಡುವುದರಲ್ಲಿ ಮಾತ್ರವಲ್ಲ. ಇಲ್ಲಿ ಪರಿಗಣಿಸಲಾಗುವುದು ಹೃದಯದಲ್ಲಿರುವ ಭಕ್ತಿಯನ್ನಾಗಿದೆಯೇ ಹೊರತು ಶರೀರದ ಕರ್ಮಗಳನ್ನಲ್ಲ. ರಾತ್ರಿಯಲ್ಲಿ ನಿದ್ದೆ ಬಿಟ್ಟು ನಮಾಝ್ ಮಾಡುವ ಎಷ್ಟೋ ಮಂದಿಯಿದ್ದಾರೆ. ನಿದ್ದೆಗೆಡುವುದರ ಹೊರತು ಅವರಿಗೆ ಬೇರಾವುದೂ ದಕ್ಕುವುದಿಲ್ಲ.

ಕವಿಯೊಬ್ಬರು ಹೇಳಿದರು:

إِنَّ الْمَقَادِيرَ إِذَا سَاعَدَتْ *** أَلْحَقَتِ النَّائِمَ بِالْقَائِمِ

“ವಿಧಿಯು ನೆರವಾದರೆ ಅದು ನಿದ್ದೆ ಮಾಡುವವನನ್ನು ನಮಾಝ್ ಮಾಡುವವನೊಂದಿಗೆ ಸೇರಿಸುತ್ತದೆ.”

ಆದರೆ ಸತ್ಕರ್ಮಗಳನ್ನು ಮಾಡುವುದಕ್ಕಾಗಿ ಪರಿಶ್ರಮಪಡಬೇಕೆಂದು ನಮ್ಮೊಂದಿಗೆ ಆದೇಶಿಸಲಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ಅವನನ್ನು ಯಾವುದಕ್ಕಾಗಿ ಸೃಷ್ಟಿಸ

ಲಾಗಿದೆಯೋ ಅದಕ್ಕಾಗಿ ಸುಲಭಗೊಳಿಸಲಾಗುವುದು. ಸೌಭಾಗ್ಯವಂತರಿಗೆ ಸೌಭಾಗ್ಯ ವಂತರ ಕರ್ಮಗಳನ್ನು ಮಾಡುವತ್ತ ಸುಲಭೀಕರಿಸಲಾಗುವುದು ಮತ್ತು ದೌರ್ಭಾಗ್ಯ ವಂತರಿಗೆ ದೌರ್ಭಾಗ್ಯವಂತರ ಕರ್ಮಗಳನ್ನು ಮಾಡುವತ್ತ ಸುಲಭೀಕರಿಸಲಾಗುವುದು. ಅಲ್ಲಾಹು ತಆಲಾ ಹೇಳುತ್ತಾನೆ:

﴿فَأَمَّا مَنْ أَعْطَىٰ وَاتَّقَىٰ * وَصَدَّقَ بِالْحُسْنَىٰ * فَسَنُيَسِّرُهُ لِلْيُسْرَىٰ * وَأَمَّا مَنْ بَخِلَ وَاسْتَغْنَىٰ * وَكَذَّبَ بِالْحُسْنَىٰ * فَسَنُيَسِّرُهُ لِلْعُسْرَىٰ ﴾

"ಆದರೆ ಯಾರು ದಾನಧರ್ಮ ಮಾಡಿ, ಭಯಭಕ್ತಿ ಪಾಲಿಸಿ, ಅತ್ಯುತ್ತಮವಾಗಿ ರುವುದನ್ನು ನಿಜಪಡಿಸುವನೋ ಅವನಿಗೆ ನಾವು ಅತ್ಯಂತ ಸುಗಮವಾಗಿರುವುದರೆಡೆಗೆ ಅನುಕೂಲ ಮಾಡಿಕೊಡುವೆವು. ಆದರೆ ಯಾರು ಜಿಪುಣತೆ ತೋರಿಸಿ, ಸ್ವಯಂ ಪರ್ಯಾಪ್ತತೆಯನ್ನು ಪ್ರಕಟಿಸಿ, ಅತ್ಯುತ್ತಮವಾಗಿರುವುದನ್ನು ನಿಷೇಧಿಸುವನೋ ಅವನಿಗೆ ನಾವು ಅತ್ಯಂತ ಕಷ್ಟವಾಗಿರುವುದರೆಡೆಗೆ ಅನುಕೂಲ ಮಾಡಿಕೊಡುವೆವು." [ಅಲ್ಲೈಲ್ 5–10]

ಆದ್ದರಿಂದ ಬಾಕಿಯುಳಿದಿರುವ ತಿಂಗಳುಗಳಲ್ಲಿ ಸತ್ಕರ್ಮಗಳನ್ನು ಮಾಡುವ ಮೂಲಕ ಅವುಗಳನ್ನು ಸದುಪಯೋಗಪಡಿಸಿ ತನ್ನ ಆಯುಷ್ಯದಲ್ಲಿ ಈಗಾಗಲೇ ನಷ್ಟವಾಗಿರುವುದನ್ನು ಪಡೆಯುವುದರೆಡೆಗೆ ಧಾವಂತದಿಂದ ಸಾಗುವುದೇ ನಿಜವಾದ ಧಾವಂತವಾಗಿದೆ.

[ಲತಾಇಫುಲ್ ಮಆರಿಫ್ ಎಂಬ ಗ್ರಂಥದಿಂದ ಪುಟ 339–351; ಸಂಕ್ಷಿಪ್ತವಾಗಿ]

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********